ನನ್ನನ್ನು ಚಕಿತಗೊಳಿಸಿವೆ
ತಾಲೀಮಿನ ಹೊತ್ತಿನಲ್ಲಿ
ಆ ಉಗ್ರ ಭಾವನೆಗಳು
ಮತ್ತು ಗರಿಗೆದರಿದ ಹಬೆ.

ನೇರ ಕಥನವಾಗಲೀ, ಖಚಿತ ಭಾವ–ಕಲ್ಪನೆಯಾಗಲೀ, ಸ್ಪಷ್ಟ ಅನುಭವ ಚಿತ್ರವಾಗಲೀ ಅವರ ಕಾವ್ಯದಲ್ಲಿ ಓದುಗರ ಕೈಗೆ ಸಿಗುವುದಿಲ್ಲ. ಆದರೆ, ಈ ಕವನಗಳು ಓದುಗರ ಪೂರ್ತಿಯಾದ ಗಮನಕ್ಕಾಗಿ ಒತ್ತಾಯಿಸುತ್ತವೆ. ವಿಪರೀತ ಮಾಹಿತಿ ಆಧಾರಿತ ನಮ್ಮ ಇಂದಿನ ದಿನಗಳಲ್ಲಿ, ವಿವಿಧ ಮಾಧ್ಯಮಗಳ ಮೂಲಕ ಬಾಯಲ್ಲಿಟ್ಟರೆ ಕರಗುವ ಪ್ರತಿಮೆಗಳ ಬಿರುಮಳೆ ಆಗುತ್ತಿರುತ್ತದೆ. ಅದರ ನಡುವೆಯೇ ಇರುವ ಓದುಗರನ್ನು ನಿಲ್ಲಿಸಿ, 'ಸಾವಕಾಶವಾಗಿ ಓದು, ಈ ಪ್ರತಿಮೆಗಳ ನಿರುಕಿಸು, ಪರೀಕ್ಷಿಸು, ಮುಖ್ಯವಾಗಿ, ಪ್ರಶ್ನಿಸು. ಹುಡುಕು ಅರ್ಥ, ಹಚ್ಚು ಇದಕ್ಕೊಂದು ಮೌಲ್ಯವನ್ನು' ಎಂದು ಕೋರುವ ಪ್ರಯೋಗಗಳು ಇವು.

ಭಾರತ, ಇಂಗ್ಲೆಂಡ್, ಅಮೆರಿಕಗಳಲ್ಲಿ ವಲಸಿತ ಸಮುದಾಯಗಳು ಎದುರಿಸುವ ತಾರತಮ್ಯ, ಹಿಂಸೆಗಳನ್ನು ಶೋಧಿಸುತ್ತದೆ ಭಾನು ಕಪಿಲ್ ಅವರ ಬರವಣಿಗೆ. ಉಕ್ತಿಗೆ ನಿಲುಕದಂತಹ ಸಂದರ್ಭಗಳನ್ನು ಹೃದಯಕ್ಕೆ ತಟ್ಟುವಂತೆ, ಬಾಳಿನ ಔನ್ನತ್ಯ ತೋರುವಂತೆ, ಅವರು ಕಥಿಸುತ್ತ ಹೋಗುತ್ತಾರೆ. ತಮ್ಮ ಗದ್ಯ ಪದ್ಯಗಳಲ್ಲಿ ಪಿತೃಪ್ರಧಾನತೆ, ಮಾನಸಿಕ ಸ್ವಾಸ್ಥ್ಯ, ಭಾರತದ ವಿಭಜನೆಯ ಕುರಿತಾಗಿ ಇರುವ ಅಂತರ–ಪೀಳಿಗೆಯ ಕ್ಷೋಭೆಗಳು, ಹಿಂಸ್ರಕ ಸಂಬಂಧಗಳಂತಹ ವಿಷಯಗಳನ್ನು ಎತ್ತಿಕೊಂಡು ಅವರು ಬರೆದಿದ್ದಾರೆ. ವಲಸಿಗ ಸಮುದಾಯದ ಅನುಭವಗಳನ್ನು ಹೆಣೆದು ಮಾಡಿರುವ ಬರಹಗಳು ಭಾನು ಅವರದ್ದು. ಅವರೇ ಹೇಳಿಕೊಂಡಿರುವಂತೆ, 'ಹೌ ಟು ವಾಶ್ ಅ ಹಾರ್ಟ್' ಕೃತಿಯಲ್ಲಿ, 'ನಾನು ವಲಸೆಯ ಕುರಿತು ಬರೆಯಬೇಕಿತ್ತು. ಆತಿಥೇಯ ಮತ್ತು ಅತಿಥಿಗಳ ಸಂಬಂಧಗಳ ಕುರಿತು ಬರೆಯಬೇಕಿತ್ತು. ಆದರೆ, ಕೆಲವೊಮ್ಮೆ ನಮಗೆ ತೋರುವ ಸ್ವಾಗತವೇ, ಮುನ್ನೆಚ್ಚರಿಕೆಯ ಹೊಸ್ತಿಲಿನಂತೆ, ಆತಿಥ್ಯದ ಮಿತಿಗಳನ್ನು ಸೂಚಿಸುವುದನ್ನು ಬರೆಯಬೇಕಿತ್ತು'.

ಇನ್ಯಾರದೋ ಮನೆಯಲ್ಲಿ
ಸದಾಕಾಲ
ಅತಿಥಿಯಾಗಿರುವುದೊಂದು ಬಳಲಿಕೆ
ಆತಿಥೇಯ ಅತಿಥಿಗೆ
ಹೇಳುವುದೆಲ್ಲವನ್ನೂ ಹೇಳಲು
ಅನುವು ಮಾಡಿದರೂ ಕೂಡ,
ಅತಿಥಿಗೆ ಗೊತ್ತು
ಆತಿಥ್ಯದ ನಿಯಮಗಳು ಚಂಚಲವೆಂದು

ಇಲ್ಲಿನ ಕವನಗಳು ಸ್ವಾಗತಕ್ಕಿರುವ ಮಿತಿಗಳನ್ನು, ವಲಸೆಗಿರುವ ಅವಕಾಶಗಳನ್ನು, ಆತಿಥೇಯರ ಬಿಗಿನಗೆ, ಅತಿಥಿಗಳ ಭಾರವಾದ ನೆನಪುಗಳ ಮೂಲಕ ಪರೀಕ್ಷಿಸುತ್ತವೆ. ಅಂಚುಗಳಲ್ಲಿ ಬಾಳುವವರು, ಹೊಸ್ತಿಲಿನಲ್ಲಿ ಭಯಭೀತರಾದವರು, ಪರಕೀಯರ ನೆರಳಲ್ಲಿ ಬದುಕುತ್ತ ನಿಟ್ಟುಸಿರಿಡುವವರನ್ನು, ಅವರ ಹೈಬ್ರಿಡ್ ರೂಪಗಳನ್ನು ಭಾನು ಕವವನಗಳು ಚಿತ್ರಿಸುತ್ತವೆ. ಅತಿಥಿ ಮತ್ತು ಆತಿಥೇಯರ ನಡುವಿನ ಬಿಗುನಗುವಿನಂತಹ ಅಸ್ಪಷ್ಟ ಅವಲಂಬನೆ ಅವರ ಕವನಗಳ ಸ್ಥಾಯಿಭಾವವಾಗಿ ಕಾಣುತ್ತದೆ:

ನಮ್ಮ ಸಾಮಾಹಿಕ ವೇದನೆಯ ಸಿಂಗರಿಸುವುದಿಲ್ಲ ನಾನು
ನಿನ್ನ ಕಾಮೋಜ್ವಲತೆ, ನನಗೆ ಕೆಲಸಲ ಅನಿಸಿದೆ, ಇರುವುದು